**ಅ.ದಾವಾ ನಂ. 146/17** **ಪಿ.ಡಬ್ಲ್ಯೂ-1**

**ದಿನಾಂಕ 06/01/2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಕೆ.ಆರ್.ಜೆ ವಕೀಲರಿಂದ**

ನಾನು ವ್ಯವಸಾಯಗಾರನಾಗಿದ್ದೇನೆ. 2 ನೇ ತರಗತಿಯವರೆಗೆ ಓದಿದ್ದೇನೆ. ದಾವಾ ಜಮೀನು ಸರ್ವೆ ನಂ. 101/12. ಸದರಿ ಜಮೀನನ್ನು ನನ್ನ ತಂದೆ ದಿಃ 27.05.2002 ರಂದು ಖರೀದಿ ಮಾಡಿದ್ದರು. ಖರೀದಿ ಸಮಯದಲ್ಲಿ ಅವರು ನಕಾಶೆ ಮಾಡಿಕೊಂಡಿಲ್ಲ. ಹಾಗಾಗಿ ಜಮೀನು ಎಲ್ಲಿ ಬರುತ್ತದೆ ಎಂಬುದನ್ನು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ ಎಂದರೆ ಸರಿ. ವಿಭಾಗದಲ್ಲಿ ರಾಮಯ್ಯ ಬಿನ್ ಜಡೆಯರವರಿಗೆ ಸರ್ವೆ ನಂ. 101/8 ರಲ್ಲಿನ 28 ಗುಂಟೆ ಬಂದಿರುತ್ತದೆ. ಚಿಕ್ಕೇಗೌಡರಿಗೆ ಸರ್ವೆ ನಂ. 107/1 ಎ ಯಲ್ಲಿನ 1 ಎಕರೆ 35 ಗುಂಟೆ ಬಂದಿದೆ. ವಿಭಾಗ ಬರವಣಿಗೆ ಆಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ರಾಮಯ್ಯ ರವರ ಪಾಲಿಗೆ ಬಂದಿದ್ದ 28 ಗುಂಟೆ ಜಮೀನಿನಲ್ಲಿ ಅವರ ಮಕ್ಕಳಿಗೆ ತಲಾ ಎಷ್ಟು ಬಂದಿದೆ ನನಗೆ ಗೊತ್ತಿಲ್ಲ.

ರಾಮಯ್ಯನವರ 28 ಗುಂಟೆ ಜಮೀನಿನಲ್ಲಿ ಜಡೇಗೌಡರಿಗೆ 14 ಗುಂಟೆ ಮತ್ತು ಕೆಂಗೇಗೌಡರಿಗೆ 14 ಜಮೀನು ಬಂದಿದೆ. ಜಡೇಗೌಡರ 14 ಗುಂಟೆ ಜಮೀನಿನ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಕಾಲುವೆ, ದಕ್ಷಿಣಕ್ಕೆ ರಸ್ತೆ ಹಾಗೂ ಉತ್ತರಕ್ಕೆ ಜಯಮ್ಮನ ಜಮೀನು ಇದೆ.

ನನ್ನ ತಂದೆ ಖರೀದಿಸಿರುವ ಜಮೀನಿನ ಪಶ್ಚಿಮಕ್ಕೆ ಕಾಲುವೆ ಇದೆ, ಉತ್ತರಕ್ಕೆ ಜಯಮ್ಮನ ಜಮೀನು ಇದೆ, ಪೂರ್ವಕ್ಕೆ ಕೆಂಗೇಗೌಡರ ಜಮೀನು ಇದೆ ಹಾಗೂ ದಕ್ಷಿಣಕ್ಕೆ ರಸ್ತೆ ಇದೆ. ಸಾಕ್ಷಿ ಮುಂದುವರಿದು ಪಶ್ಚಿಮಕ್ಕೆ ಜಡೇಗೌಡರ ಮಗ ಸ್ವಾಮೀಗೌಡರ ಜಮೀನು ಇದೆ ಎಂದು ನುಡಿಯುತ್ತಾರೆ. ನನ್ನ ತಂದೆ ಮಾಡಿಕೊಂಡಿರುವ ಕ್ರಯ ಪತ್ರ ಹಾಜರು ಮಾಡಲು ತೊಂದರೆ ಇಲ್ಲ ಎಂದರೆ ಸರಿ.

ನನ್ನ ತಂದೆ ಸಿದ್ದರಾಮೇಗೌಡ, 2 ನೇ ಪ್ರತಿವಾದಿಯ ಗಂಡ ಕೃಷ್ಣೇಗೌಡ ಮತ್ತು 1 ನೇ ಪ್ರತಿವಾದಿಯ ನಡುವೆ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣ ನಡೆದಿದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಯಾವ ಆದೇಶ ಆಗಿದೆ ನನಗೆ ಗೊತ್ತಿಲ್ಲ. ಸರ್ವೆನಂ. 101 ರಲ್ಲಿ ಒಟ್ಟು ಎಷ್ಟು ಜಮೀನು ಇದೆ ಹಾಗೂ ಅದರ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರಿನಲ್ಲಿನ ಯಾವುದೆ ಜಮೀನು ಭೂ-ಸ್ವಾಧೀನ ಆಗಿಲ್ಲ.

ನಿ.ಪಿ 1 ರ ವಿಭಾಗ ಪತ್ರದಲ್ಲಿ ದಾವಾ ಸರ್ವೆ ನಂ 101/12 ಸೇರ್ಪಡೆ ಆಗಿಲ್ಲ ಎಂದರೆ ಸಾಕ್ಷಿ ಆಗ ಸರ್ವೆ ನಂ. 101/8 ಇತ್ತು ಎಂದು ನುಡಿಯುತ್ತಾರೆ. ಸದರಿ ವಿಭಾಗ ಪತ್ರದ ಪೈಕಿ ನನಗೆ 101/8 ರಲ್ಲಿನ 4 ಗುಂಟೆ ಜಮೀನು ಪಾಲಿಗೆ ಬಂದಿದ್ದು ಅದರ ಪೂರ್ವಕ್ಕೆ ಕೆಂಗೇಗೌಡರ ಜಮೀನು, ಪಶ್ಚಿಮಕ್ಕೆ ಜಡೇಗೌಡರ

ಜಮೀನು, ಉತ್ತರಕ್ಕೆ ಜಯಮ್ಮನ ಜಮೀನು ಹಾಗೂ ದಕ್ಷಿಣಕ್ಕೆ ರಾಜೇಗೌಡರ ಜಮೀನು ಇದೆ. ನನಗೆ ದಾವಾ ಆಸ್ತಿಯ ಬಗ್ಗೆ ಯಾವುದೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಎಲ್ಲಿದೆ ಎಂಬುದು ಹಾಗೂ ಅದರ ಸರಿಯಾದ ಚೆಕ್ಕುಬಂದಿಯೂ ಸಹ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದ ಪತ್ರದ ಖಂಡಿಕೆ10 ರಲ್ಲಿ ಹೇಳಿರುವಂತೆ 2 ನೇ ಪರತಿವಾದಿಯ ಗಂಡನ ಹಿಸ್ಸೆಗೆ ಸರ್ವೆನಂ. 51/3 ರಲ್ಲಿನ 2 ಗುಂಟೆ, 101/3 ರಲ್ಲಿನ 2 ಗುಂಟೆ, 101/7 ಎ ರಲ್ಲಿನ 33 ಗುಂಟೆ, 51/4 ಎ ರಲ್ಲಿನ 7 ಗುಂಟೆ, 101/71 ಎ 2 ರಲ್ಲಿನ 19 ವರೆ ಗುಂಟೆ ಮತ್ತು 101/71 ಎ 3 ರಲ್ಲಿನ 13 ವರೆ ಗುಂಟೆ ಜಮೀನು ಹೊಂದಿದ್ದೆ ಈಗ 2 ನೇ ಪ್ರತಿವಾದಿ ಸದರಿ ಜಮೀನುಗಳ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ನಾನು ದಾವಾ ಜಮೀನು ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 101/8 ರಲ್ಲಿನ 28 ಗುಂಟೆ ರಾಮಯ್ಯನವರಿಗೆ ಸೇರಿದ್ದು ಎಂಬುದನ್ನು ತೋರಿಸಲು ದಾಖಲಾತಿ ಹಾಜರು ಮಾಡಿದ್ದೇನೆ. ಸದರಿ ಸರ್ವೆ ನಂಬರಿನ ಯಾವುದೆ ದಾಖಲಾತಿ ಹಾಜರು ಮಾಡದೆ ಪ್ರತಿವಾದಿಯರಿಗೆ ತೊಂದರೆ ಸುಳ್ಳು ದಾವೆ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಕೆಂಗೇಗೌಡ ಮತ್ತು ಜಡೇಗೌಡರ ನಡುವಿನ ವಿಭಾಗ ಬರವಣಿಗೆ ಆಗಿದೆ. ಸದರಿ ವಿಭಾಗದ ದಾಖಲಾತಿ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರಕ್ಕೆ ಸಾಕ್ಷಿದಾರರಾಗಿ ಯಾರು ಸಹಿ ಮಾಡಿದ್ದಾರೆ ನನಗೆ ಗೊತ್ತಿಲ್ಲ.

**ಮರು ವಿಚಾರಣೆಃ ಇಲ್ಲ**

**ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸ.ಇ.**

**ಜೆಎಂಎಫ್‌ಸಿ., ಹೊಳೆನರಸೀಪುರ.**